ರಾ ಗ – ಮ ಧ್ಯ ಮಾ ವ ತಿ : ತಾ ಳ – ಆ ದಿ ತಾ ಳ

ರಾಮ ಮಂತ್ರವ ಜಪಿಸೊ ಹೇ ಮನುಜ
ರಾಮ ಮಂತ್ರವ ಜಪಿಸೊ ।ಪ।

ಆ ಮಂತ್ರ ಈ ಮಂತ್ರ ಜಪಿಸಿ ನೀ ಕೆಡಬೇಡ
ಸೋಮಶೇಖರ ತನ್ನ ಭಾಮೆಗೆ ಪೇಳಿದ ಮಂತ್ರ ।ಅ.ಪ.।

ಕುಲಹೀನನಾದರೂ ಕೂಗಿ ಜಪಿಸಿವ ಮಂತ್ರ
ಜಲಜಪಾಣಿ ನಿತ್ಯ ಜಪಿಸುವ ಮಂತ್ರ
ಕಲುಷ ಪರ್ವತಕಿದು ಕುಲಿಶವಾಗಿಹ ಮಂತ್ರ
ಸುಲಭದಿಂದಲಿ ಮೋಕ್ಷ ಸೂರೆಗೊಂಬುವ ಮಂತ್ರ ।೧।

ಮರುತಾತ್ಮಜ ನಿತ್ಯ ಸ್ಮರಣೆ ಮಾಡುವ ಮಂತ್ರ
ಸರ್ವ ಋಷಿಗಳಲ್ಲಿ ಸೇರಿದ ಮಂತ್ರ
ದುರಿತಕಾನನಕಿದು ದಾವಾನಲಮಂತ್ರ
ಪೊರೆದು ವಿಭೀಷಣಗೆ ಪಟ್ಟಗಟ್ಟಿದ ಮಂತ್ರ ।೨।

ಜ್ಞಾನನಿಧಿ ನಮ್ಮ ಆನಂದತೀರ್ಥರು
ಸಾನುರಾಗದಿ ನಿತ್ಯ ಸೇವಿಪ ಮಂತ್ರ
ಭಾನುಕುಲಾಂಬುಧಿ ಸೋಮನೆನಿಪ ನಮ್ಮ
ದೀನರಕ್ಷಕ ಪುರಂದರವಿಠಲನ ಮಂತ್ರ ।೩।

ರಾ ಗ – ಸಾ ವೇ ರಿ : ತಾ ಳ – ಅ ಟ ತಾ ಳ

ರಾಮ ಶ್ರೀ ರಘುನಂದನ ಶರಣು ಸಾರ್ವ–
ಭೌಮ ಭೂಸುರವಂದ್ಯ
ಸೋಮಶೇಖರಮಿತ್ರ ಕಾಮಿತ ಫಲದಾತ್ರ
ಕಾಮಧೇನು ವಿಶ್ವ ಭೀಮಸನ್ನುತ ಸೀತಾ ।ಪ।

ಕ್ರೂರ ದಾನವಸಂಹಾರ ಕೌಸಲ್ಯಾಕುಮಾರ ಭೂ–
ಭಾರಹರ ಭಜಕಜನೋದ್ಧಾರ ವೇದಾಂತಸಾರ
ಚಾರುವದನ ಮಣಿಹಾರಕುಂಡಲಧರ
ವೀರರಾಘವ ವಿಶ್ವಾಧಾರ ಕರುಣಿಸು ಸೀತಾ ।೧।

ಪಾಪರಹಿತ ಪಾವನಚರಿತ ಅಹಲ್ಯಾ
ಶಾಪಹರಣ ದಿವ್ಯರೂಪ ರಮಾರಮಣ
ತಾಪವಿಚ್ಛೇದನ ತಾಮಸಗುಣಹರಣ ದ–
ಯಾಪರ ಬ್ರಹ್ಮಸ್ವರೂಪಮೂರುತಿ ಸೀತಾ ।೨।

ಮದನಕೋಟಿ ಮೋಹನಾಂಗ ಮಾಧವ ಪುಣ್ಯಚರಿತ
ಕರುಣಾಪಾಂಗ ಹೆಳವನಕಟ್ಟೆರಂಗಯ್ಯ
ಸದಾನಂದ ಸುಮತೀಂದ್ರಹೃದಯಪಂಕಜಭೃಂಗ
ಕದನವಿಕ್ರಮಬಾಹುಕೋದಂಡಧೃತ ಸೀತಾ ।೩।

**ರಾಗ –ಕಾಂಬೋಧಿ ತಾಳ – ಝಂಪೆತಾಳ**

ರಾಮ ಎಂಬುವ ಎರಡು ಅಕ್ಷರದ ಮಹಿಮೆಯನು
ಪಾಮರರು ತಾವೇನು ಬಲ್ಲರಯ್ಯ । ಪ ।

"ರಾ" ಎಂದ ಮಾತ್ರದೊಳು ರಕ್ತಮಾಂಸದೊಳಿದ್ದ
ಆ ಅಸ್ಥಿತಿಗತವಾದ ಅತಿ ಪಾಪವನ್ನು
ಮಾಯವನು ಮಾಡಿ ಮಹರಾಯ ಮುಕ್ತಿಯ ಕೊಡುವ
ದಾಯವನು ವಾಲ್ಮೀಕಿಮುನಿರಾಯ ಬಲ್ಲ । ೧ ।

ಮತ್ತೆ "ಮ" ಎಂದೆನಲು ಹೊರಬಿದ್ದ ಪಾಪಗಳು
ಒತ್ತಿ ಒಳಗೆ ಪೋಗದಂತೆ ಕವಾಟವಾಗಿ
ಚಿತ್ತಕಾಯಗಳ ಪವಿತ್ರ ಮಾಡುವ ಪರಿಯ
ಭಕ್ತವರ ಹನುಮಂತನೊಬ್ಬ ತಾ ಬಲ್ಲ । ೨ ।

ಧರೆಯೊಳೀ ನಾಮಕೆ ಸರಿಮಿಗಿಲು ಇಲ್ಲೆಂದು
ಪರಮವೇದಗಳೆಲ್ಲ ಪೊಗಳುತಿಹವು
ಸಿರಿಯರಸ ಪುರಂದರವಿಠಲನ ನಾಮವನು
ಸಿರಿಕಾಶಿಯೊಳಗಿಪ್ಪ ಶಿವ ತಾನು ಬಲ್ಲ । ೩ ।

**ರಾಗ – ಮಧ್ಯಮಾವತಿ ತಾಳ – ಆಟತಾಳ**

ರಾಮನಾಮವ ನುಡಿ ನುಡಿ
ಕಾಮಕ್ರೋಧವ ಬಿಡಿ ಬಿಡಿ । ಪ ।

ಹರಿನಿರ್ಮಾಲ್ಯವ ಮುಡು ಮುಡಿ
ಪರಮಾಮೃತ ರಸ ಕುಡಿ ಕುಡಿ
ಗುರುಗಳ ಚರಣವ ಹಿಡಿ ಹಿಡಿ
ಬಂದ ದುರಿತಗಳೆಲ್ಲವ ಹೊಡಿ ಹೊಡಿ । ೧ ।

ಸಜ್ಜನಸಂಗವ ಮಾಡೋ ಮಾಡೋ
ದುರ್ಜನಸಂಗವ ಬಿಡೋ ಬಿಡೋ
ನಮ್ಮ ಅರ್ಜುನಸಾರಥಿಯ ನೋಡೋ ನೋಡೋ
ಹರಿಭಜನೆಯಲಿ ಮನ ಇಡೋ ಇಡೋ । ೨ ।

ಕರಿರಾಜವರದನ ಸಾರೋ ಸಾರೋ
ಪರಿಹರಿಸೆಂದೊ ಹೋರೋ ಹೋರೋ
ವರದಭೀಮೇಶನ ದೂರದಿರೋ ನಮ್ಮ
ಪುರಂದರವಿಠಲನ ಸೇರೋ ಸೇರೋ । ೩ ।

ರಾಗ – ಬಿಲಹರಿ ತಾಳ – ಛಾಪುತಾಳ

ರಾಮ ರಾಮ ರಾಮ ಎನ್ನಿರೋ ಇಂಥಾ –
ಸ್ವಾಮಿಯ ನಾಮವ ಮರೆಯದಿರೊ ।ಪ।

ತುಂಬಿದ ಪಟ್ಟಣಕೊಂಭತ್ತು ಬಾಗಿಲು
ಸಂಭ್ರಮದರಸುಗಳೈದು ಮಂದಿ
ಡಂಭಕತನದಿಂದ ಕಾಯುವ ದೇಹವ
ನಂಬಿ ನೆಚ್ಚಿ ನೀವು ಕೇಡಬೇಡಿರೊ ।೧।

ನೆಲೆಯಿಲ್ಲವೀಕಾಯ ಎಲುವಿನ ಹಂದರ
ಬಲಿದು ಸುತ್ತಿದ ಚರ್ಮದ ಹೊದಿಕೆ
ಮಲಮೂತ್ರಂಗಳು ಕೀವು ಕ್ರಿಮಿಗಳುಳ್ಳ
ಹೊಲಸು ತೊಗಲು ಮೆಚ್ಚಿ ಕೆಡಬೇಡಿರೋ ।೨।

ಹರಬ್ರಹ್ಮಸುರರಿಗೆ ವಂದ್ಯನು ಆಗಿಪ್ಪ
ಹರಿಸರ್ವೊತ್ತಮ ಎಂದೆನ್ನಿರೊ
ಪುರಂದರವಿಠಲನ ಚರಣವ ಭಜಿಸಿರೋ
ದುರಿತಭಯಗಳಿಂದ ದೂರಾಗಿರೊ ।೩।

ರಾಗ –ಧನ್ಯಾಸಿ ತಾಳ – ಆದಿತಾಳ

ರಾಮ ರಾಮ ಎಂಬೆರದಕ್ಷರ
ಪ್ರೇಮದಿ ಸಲಹಿತು ಸುಜನರನು । ಪ ।

ಹಾಲಾಹಲವನು ಪಾನವ ಮಾಡಿದ
ಫಾಲಲೋಚನನೆ ಬಲ್ಲವನು
ಆಲಾಪಿಸುತ ಶಿಲೆಯಾಗಿದ್ದ
ಬಾಲೆ ಅಹಲ್ಯೆಯ ಕೇಳೇನು । ೧ ।

ಅಂಜಿಕೆಯಿಲ್ಲದ ಗಿರಿ ಸಾರಿದ ಕಪಿ
ಕುಂಜರ ರವಿಸುತ ಬಲ್ಲವನು
ಎಂಜಲ ಫಲಗಳ ಹರಿಗರ್ಪಿಸಿದ
ಕಂಜಲೋಚನೆಯ ಕೇಳೇನು । ೨ ।

ಕಾಲವನರಿತು ಸೇವೆಯ ಮಾಡಿದ
ಲೋಲ ಲಕ್ಷ್ಮಣನೆ ಬಲ್ಲವನು
ವ್ಯಾಳಶಯನ ಶ್ರೀವಿಜಯವಿಠಲನ
ಲೀಲೇ ಶರಧಿಯ ಕೇಳೇನು । ೩ ।